ಉ)

- ಯಾವುದೇ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.
- ಕಳಪೆ ಕಾಮಗಾರಿಗಳ ಬಗ್ಗೆ ದೂರು ಬಂದಲ್ಲಿ ತನಿಖಾಧಿಕಾರಿಗಳನ್ನು ಕಳುಹಿಸಿ ತನಿಖಾ ವರದಿಯನ್ನು ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೊಬೈಲ್ ಟವರ್‌ಗಳು

3179 (3385); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಬೀದರ್ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಯಾವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೊಬೈಲ್ ಹಾಗೂ ಇತರೆ ಟವರ್‌ಗಳನ್ನು ನಿರ್ಮಿಸಲು ಪರವಾನಿಗೆ ನೀಡಲಾಗಿದೆ; (ಗ್ರಾಮ ಪಂಚಾಯತಿವಾರು ಸಂಪೂರ್ಣ ಮಾಹಿತಿ ನೀಡುವುದು)

ಇ) ಈ ಟವರ್‌ಗಳನ್ನು ಸ್ಥಾಪಿಸಲು ಇರುವ ನಿಯಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಈ) ಸದರಿ ಟವರ್‌ಗಳಿಂದ ಬಂದ ಆದಾಯದ ಮೊತ್ತವೆಷ್ಟು; (ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು)

ಉ) ಈ ಮೊತ್ತವನ್ನು ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಮಾ ಮಾಡಿಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

ಊ) ಸದರಿ ಮೊತ್ತವನ್ನು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುವುದು? (ಮಾಹಿತಿ ನೀಡುವುದು)

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ 186 ಗ್ರಾಮ ಪಂಚಾಯತಿಗಳಿರುತ್ತವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

1) ಔರಾದ್ – 39
2) ಬಸವಕಲ್ಯಾಣ – 38
3) ಭಾಲ್ಕಿ – 40
4) ಬೀದರ್ – 35
5) ಹುಮನಾಬಾದ್ – 34

ಆ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರಲ್ಲಿ ಮೊಬೈಲ್ ಟವರ್ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತಿಯ ಪರವಾನಗಿ ಪಡೆಯುವ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ.

ಇ)

1) ಟವರ್ ಸ್ಥಾಪಿಸಲು ನಿವೇಶನದ ಮಾಲೀಕರ ಆಕ್ಷೇಪಣಾ ರಹಿತ ಪ್ರಮಾಣ ಪತ್ರ ನೀಡುವುದು.
2) ಎಸ್ಕಾಂನಿಂದ ಟವರ್ ಸ್ಥಾಪಿಸಲು ಆಕ್ಷೇಪಣಾ ರಹಿತ ಪ್ರಮಾಣ ಪತ್ರ ನೀಡುವುದು.
3) ಟವರ್ ಮಾಲೀಕರು ಹಾಗೂ ನಿವೇಶನದ ಮಾಲೀಕರ ನಡುವಿನ ಒಪ್ಪಂದ ಪತ್ರ ಪಡೆಯುವುದು.
4) ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯ ಅನುಮೋದನೆ ಪಡೆಯುವುದು.
5) ಟವರ್ ಸ್ಥಾಪಿಸುವ ಸ್ಥಳದ ಅಕ್ಕಪಕ್ಕದ ನಿವಾಸಿಗಳ ಒಪ್ಪಿಗೆ ಪತ್ರ ಪಡೆಯುವುದು.

ಈ) ಟವರ್‌ಗಳಿಂದ ಇಲ್ಲಿವರೆಗೂ ತೆರಿಗೆ ವಸೂಲಿಯಾಗಿರುವುದಿಲ್ಲ.

ಉ) ವಸೂಲಿ ಮಾಡಿದ ನಂತರ ಮೊತ್ತವನ್ನು ಗ್ರಾಮ ಪಂಚಾಯತಿ ನಿಧಿಗೆ ಜಮೆ ಮಾಡಿಕೊಳ್ಳಲಾಗುವುದು.

ಊ) ಗ್ರಾಮ ಪಂಚಾಯತಿಗಳ ನಿರ್ವಹಣೆಗೆ ಬಳಸಿಕೊಳ್ಳಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳು

3181 (3659); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಅನುದಾನರಹಿತ ಹಾಗೂ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು;

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯವಾರು ಶಾಲೆಗಳೆಷ್ಟು (ಅವುಗಳ ಹೆಸರು ಮತ್ತು ವಿಳಾಸ ನೀಡುವುದು);

ಇ) ಸರ್ಕಾರದ ನೀತಿಯಂತೆ ಶಾಲೆಯನ್ನು ಪ್ರಾರಂಭಿಸಲು ಆಟದ ಮೈದಾನ ಹೊಂದಿರುವುದು ಕಡ್ಡಾಯವಲ್ಲವೇ;

ಈ) ಹಾಗಿದ್ದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಎಲ್ಲಾ ಶಾಲೆಗಳು ಆಟದ ಮೈದಾನವನ್ನು ಹೊಂದಿವೆಯೇ (ವಲಯವಾರು, ಶಾಲಾವಾರು, ಆಟದ ಮೈದಾನದ ವಿಸ್ತೀರ್ಣದ ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ)

ವಿವರ	ಪ್ರಾಥಮಿಕ	ಪ್ರೌಢ
ಅನುದಾನಿತ	371	262
ಅನುದಾನ ರಹಿತ	1668	1535